ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 02.07.2024.

**ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಡಿ.ಕೆ. ವಕೀಲರಿಂದ:**

ನನ್ನ ತಾಯಿ ಹೆಸರು ಚಾಂದಬೀ ಇರುತ್ತದೆ. ನನ್ನ ತಾಯಿ ಚಾಂದಬೀ ಜೀವಂತ ಇದ್ದಾರೆ. ನನ್ನ ತಾಯಿ ಚಾಂದಬೀ ರವರ ಮದುವೆ ಮೌಲಾಸಾಬ ಅಂದರೆ ನನ್ನ ತಂದೆ ಜೊತೆ ಆಗಿರುತ್ತದೆ. ನನ್ನ ತಾಯಿ ಚಾಂದಬೀ ಮದುವೆ ಮೌಲಾಸಾಬ ಜೊತೆ ಯಾವತ್ತು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಸಂಪ್ರದಾಯ ಪ್ರಕಾರ ಮದುವೆಯು ಖಾಜಿ ಸಮ್ಮುಖದಲ್ಲಿ ಆಗುತ್ತದೆ ಎಂದರೆ ಸರಿ. ಈ ದಾವೆ ಹಾಕಿದ್ದು ನನ್ನ ತಾಯಿ ಚಾಂದಬೀ ಗೊತ್ತಿರುತ್ತದೆ. ನನ್ನ ಮತ್ತು ನನ್ನ ತಾಯಿಯ ಮದುವೆ ಬಗ್ಗೆ ನಿಖಾನಾಮವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ತಂದೆ ಹೆಸರು ಮೌಲಾಸಾಬ ಇರುತ್ತದೆ ಎಂದು ತೋರಿಸಲು, ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಅವುಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ದಾಖಲೆಗಳು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಮತ್ತು ಮೌಲಾಸಾಬ ಹಾಗೂ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೌಲಾಸಾಬನ ಆಸ್ತಿಯ ಮೇಲೆ ನನಗೆ ಯಾವುದೇ ರೀತಿ ಹಕ್ಕು ಇರದೇ ಇದ್ದರೂ ಕೂಡಾ, ಆತನ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ, ತಹಶಿಲ್ದಾರ ಕಛೇರಿಯಲ್ಲಿ ಸುಳ್ಳು ಹೇಳಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ರೀತಿ ವಾಟ್ನಿ ಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ವಾಟ್ನಿ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ತಹಶಿಲ್ದಾರ ನಾನು ಹೇಳುವಂತಹ ದಾಖಲೆ ಯಾವುದೇ ಇಲ್ಲ ಎಂದು ನಿಪಿ-26 ರಂತೆ ತಹಶಿಲ್ದಾರ ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವಂತೆ ಚಾಂದಬೀ ಮೌಲಾಸಾಬನ 2 ನೇ ಹೆಂಡತಿ ಇರುತ್ತಾಳೆ ಎಂಬುವುದು ಸುಳ್ಳು ಇದೆ ಎಂದರೆ ಸರಿಯಲ್ಲ. ಚಾಂದಬೀ ಮೌಲಾಸಾಬನ 2 ನೇ ಹೆಂಡತಿಯಾಗಿದ್ದು, ಅವರ ಸಂಸ್ಕಾರಿಕ ಜೀವನದಲ್ಲಿ ನಾನು ಜನಿಸಿರುತ್ತೇನೆ ಎಂಬುವುದು ಸುಳ್ಳು ಇದೆ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರದ ಜೊತೆ ನಾವು ಹಾಜರುಪಡಿಸಿದ ವಂಶಾವಳಿ ತಪ್ಪು ಇದೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಜೊತೆ ಹಾಜರುಪಡಿಸಿದ ವಂಶಾವಳಿ ನಾವು ಸೃಷ್ಠಿ ಮಾಡಿದ ವಂಶಾವಳಿ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಕಛೇರಿಯಿಂದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಮದುವೆ ಈ ಮೊದಲು ಯಾರು ಜೊತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ-21 ರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-21 ರಲ್ಲಿ ಚಾಂದಬೀ ಹೆಸರು ಕಾಣಿಸುತ್ತಿದೆ ಎಂದರೆ ಸರಿ. ನಿಪಿ-21 ರ ಪ್ರಕಾರ ಚಾಂದಬೀ ಮದುವೆ ಹುಸೇನ್ ಸಾಬ ಜೊತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾಯಿ ಚಾಂದಬೀ ಮದುವೆ ಮೌಲಾಸಾಬ ಜೊತೆ ಯಾವುತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೌಲಾಸಾಬನ ಮೊದಲನೇ ಹೆಂಡತಿ ಹೆಸರು ಮೌಲಂಬೀ ಇರುತ್ತದೆ.

ಮೌಲಂಬೀ ಮತ್ತು ಚಾಂದಬೀ ಕಾಸಾ ಅಕ್ಕ-ತಂಗಿಯರು ಎಂದರೆ ಸರಿ. ಒಂದು ಮನೆಯಿಂದ ಒಬ್ಬ ಹೆಣ್ಣು ಮಗಳನ್ನು ಒಬ್ಬ ಪುರುಷನೊಂದಿಗೆ ಮದುವೆ ಮಾಡಿಕೊಟ್ಟಾಗ, ನಮ್ಮ ಸಂಪ್ರದಾಯದಲ್ಲಿ ಅದೇ ಪುರುಷನಿಗೆ ಪುನಃ ಸದರಿ ಹೆಣ್ಣು ಮಗಳ ಸಹೋದರಿಯನ್ನು ಮದುವೆ ಮಾಡಿಕೊಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮತ್ತು ಮೌಲಂಬೀ ಕಾಸಾ ಅಕ್ಕ-ತಂಗಿಯರು ಇರುವ ಕಾರಣ ಮೌಲಾಸಾಬ ಜೊತೆ ಮದುವೆಯಾಗಲು ನಮ್ಮ ಸಂಪ್ರದಾಯ ಪ್ರಕಾರ ನಿಷೇಧ ಇದೆ ಎಂದರೆ ಸರಿಯಲ್ಲ. ಆ ರೀತಿ ಮದುವೆಯಾಗಬೇಕಾದರೆ ಮೊದಲನೇ ಹೆಂಡತಿಯ ವಿಚ್ಛೆದನ ಆಗಿರಬೇಕು ಎಂದರೆ ನನಗೆ ಗೊತ್ತಿಲ್ಲ.

ಮೌಲಾಸಾಬ ರವರಿಗೆ ಬಾಬುಮಿಯಾ ಎಂದು ಕೂಡಾ ಕರೆಯುತ್ತಿದ್ದರು ಎಂದು ಸುಳ್ಳು ಹೇಳಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಬಾಬುಮಿಯಾ ಅಂತ ಕರೆಯುತ್ತಿದ್ದರು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ವಕೀಲರಿಗೆ ಕೊಟ್ಟಿರುತ್ತೇನೆ. ನನ್ನ ತಂದೆಗೆ ಬಾಬುಮಿಯಾ ಎಂದು ಕರೆಯುತ್ತಿದ್ದರು ಎಂದು ತೋರಿಸುವ ಸಲುವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೌಲಾಸಾಬ ರವರ ತಂದೆ ಹೆಸರು ದಾವಲ್‌ಸಾಬ ಇರುತ್ತದೆ. ಮೌಲಾಸಾಬ ರವರು 2013 ಡಿಸೆಂಬರ ತಿಂಗಳಲ್ಲಿ ತಿರಿಕೊಂಡಿರುತ್ತಾರೆ. 2013 ರ ಡಿಸೆಂಬರ ತಿಂಗಳಲ್ಲಿ ಮೌಲಾಸಾಬ ತಿರಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೌಲಾಸಾಬ ರವರು ದಿಃ 27.08.2013 ರಂದು ತಿರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಡಿ-2 ರಂತೆ ಮೌಲಾಸಾಬ ರವರು ದಿಃ 27.08.2013 ಇದೆ ಎಂದರೆ ಸರಿ. ನಿಡಿ-

2 ರಲ್ಲಿ ಮೌಲಾಸಾಬ ರವರು ಕಲಬುರಗಿಯ ಗಾಲಿಬ್ ಕಾಲೋನಿಯಲ್ಲಿ ಮರಣ ಹೊಂದಿರುತ್ತಾರೆ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೌಲಾಸಾಬ ರವರು ನಮ್ಮ ಮನೆಯಲ್ಲಿ ತಿರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಚಾಂದಬೀ ಹೆಸರು ಇರುವುದಿಲ್ಲ ಎಂದರೆ ಸರಿ. ನಿಡಿ-3 ರಲ್ಲಿ ಚಾಂದಬೀ ಹೆಸರು ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ಮೌಲಾಸಾಬ ರವರಿಗೆ ಬಾಬುಮಿಯಾ ಎಂದು ಕರೆಯುತ್ತಿದ್ದರು ಎಂಬುವುದರ ಸಲುವಾಗಿ ಪಡಿತರ ಚೀಟಿಯಾಗಲಿ, ಮತದಾರರ ಯಾದಿ ಆಗಲಿ ಮತ್ತು ಇತರೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯ ಪಹಣಿಗಳಲ್ಲಿಯು ಕೂಡಾ ನನ್ನ ತಂದೆ ಮೌಲಾಸಾಬ ರವರ ಹೆಸರು ಬಾಬುಮಿಯಾ ಎಂದು ಕೂಡಾ ಕಾಣಿಸಿಲ್ಲ ಎಂದರೆ ಸರಿ.

ನಿಪಿ-24 ರ ದಾಖಲೆ ಮರಣ ಪ್ರಮಾಣ ಪತ್ರ ಇರುತ್ತದೆ. ನಿಪಿ-24 ರಲ್ಲಿ ಬಾಬುಮಿಯಾ ಹೆಸರು ಇದೆ ಎಂದರೆ ಸರಿ. ಅದೇ ರೀತಿ ಬಾಬುಮಿಯಾ ಅಲಿಯಾಸ್ ಹುಸೇನ್ ಸಾಬ ಎಂದು ಬರೆದಿದೆ ಎಂದರೆ ಸರಿ. ನಿಪಿ-24 ರ ಹುಸೇನ್ ಸಾಬ ರವರು ನಿಪಿ-21 ರಲ್ಲಿ ತೋರಿಸಿದ ಹುಸೇನ್ ಸಾಬ ಆಗಿರುತ್ತಾರೆ ಎಂದರೆ ಸರಿ. ನಿಪಿ-24 ರ ಪ್ರಕಾರ ಮರಣ ದಿಃ 29.12.2013 ರಂದು ಎಂದು ನಮೂದಿಸಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಹುಸೇನ್ ಸಾಬ ಮರಣ ದಿನಾಂಕ ಅಲ್ಲ, ನನ್ನ ತಂದೆ ಮೌಲಾಸಾಬ ರವರ ದಿನಾಂಕ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-24 ರಲ್ಲಿ ಚಾಂದಬೀ ಹೆಸರು ಇದೆ ಎಂದರೆ ಸರಿ. ನಿಪಿ-24 ರ ದಾಖಲೆಯಲ್ಲಿ ತಂದೆ ಹೆಸರು ನಬಿಸಾಬ ಎಂದು ನಮೂದಿಸಿದೆ ಎಂದರೆ ಸರಿ.

ಮೌಲಾಸಾಬ ರವರಿಗೆ ಗೊತ್ತಿರದೇ ಅವರ ವಾರಸುದಾರ ನಾವು ಇರುತ್ತೇವೆ ಎಂದು ತಹಶಿಲ್ದಾರ ಕಛೇರಿಯಲ್ಲಿ ನಮ್ಮ ಹೆಸರು ದಾಖಲಿಸಿಕೊಂಡು, ಬೇರೆಯರಿಗೆ ಆಸ್ತಿ ಮಾರಾಟ ಮಾಡಿದ್ದು ತಪ್ಪು ಇದೆ ಎಂದರೆ ಸರಿಯಲ್ಲ. ನಿಪಿ-18 ರಿಂದ 20ರ ದಾಖಲೆಗಳಲ್ಲಿ ನನ್ನ ಹೆಸರು ಇದೆ ಎಂದರೆ ಸರಿ. ಸದರಿ ಮೂರು ಕ್ರಯ ಪತ್ರಗಳಲ್ಲಿ ಮೌಲಾಸಾಬ ರವರ ಹೆಸರಿನ ಮುಂದೆ ಅಲಿಯಾಸ್ ಬಾಬುಮಿಯಾ ಎಂದು ಕಾಣಿಸಿಲ್ಲ ಎಂದರೆ ಸರಿ. ನಿಪಿ-18 ರಿಂದ 20ರ ಕ್ರಯ ಪತ್ರಗಳು ಮೌಲಾಸಾಬ ರವರಿಗೆ ಗೊತ್ತಿರದೇ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆ ನಮಗೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-18 ಮತ್ತು 19ರ ದಾಖಲೆಗಳಲ್ಲಿ ಮೌಲಾಸಾಬ ರವರ ಹೆಸರಿನ ಮುಂದೆ ಬಾಬುಮಿಯಾ ಅಂತ ಕೂಡಾ ಅವರು ಕಾಣಿಸುತ್ತಿದ್ದರು, ಆದರೆ ಏಕೆ ಬರೆದುಕೊಳ್ಳಲಿಲ್ಲ ಎಂದರೆ, ಸಾಕ್ಷಿ ಮೌಲಾಸಾಬ ಹೆಸರು ಆಸ್ತಿಗಳಲ್ಲಿ ಮೌಲಾಸಾಬ ಎಂದು ಇತ್ತು, ಆ ಕಾರಣ ಬಾಬುಮಿಯಾ ಎಂದು ಯಾವುದೇ ದಾಖಲೆಗಳಲ್ಲಿ ಕಾಣಿಸಿಲ್ಲ ಎಂದು ನುಡಿಯುತ್ತಾರೆ. ಮೌಲಾಸಾಬ ಮತ್ತು ಮೌಲಾಸಾಬನ ಹೆಂಡತಿ ಮೌಲಂಬೀ ರವರಿಗೆ ಗೊತ್ತಿರದೇ ಅವರ ಹೆಸರುಗಳನ್ನು ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-18 ಮತ್ತು 19ರ ದಾಖಲೆಗಳನ್ನು ಮೌಲಂಬೀ ಮತ್ತು ಮೌಲಾಸಾಬ ರವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೇ ಉಪ ನೋಂದಣಿ ಕಛೇರಿಗೆ ಬಂದಿರುತ್ತಾರೆ ಎಂದು ತೋರಿಸುವ ಸಲುವಾಗಿ, ಅವರ ಸಹಿಗಳನ್ನು ಖೊಟ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಮೌಲಾಸಾಬನ ಆಸ್ತಿಗಳನ್ನು ಒಡೆದುಕೊಳ್ಳುವ ಉದ್ದೇಶದಿಂದ, ಹುಸೇನ್ ಸಾಬ ರವರಿಗೆ

ನಾನು ಮೌಲಾಸಾಬ ಎಂದು ಹೇಳಿ ದಾಖಲೆಗಳನ್ನು ಸೃಷ್ಠಿ ಮಾಡಿ, ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮೌಲಾಸಾಬ ಬೇರೆ ಮತ್ತು ಹುಸೇನ್ ಸಾಬ ಬೇರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 1 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ ಎ.ಡಬ್ಲ್ಯೂ.ಎ. ವಕೀಲರಿಂದ:

ಮೌಲಾಸಾಬ ನಮಗೆ ತನ್ನ ಆಸ್ತಿಗಳನ್ನು ಹಿಭಾ ಮತ್ತು ವಾಟ್ನಿ ಮಾಡಿಕೊಟ್ಟಿದ್ದರ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನ್ಯಾಯಾಲಯಕ್ಕೆ ಕೊಟ್ಟ ಬಗ್ಗೆ ಗೊತ್ತಿಲ್ಲ, ಆದರೆ ವಕೀಲರಿಗೆ ಕೊಟ್ಟಿರುತ್ತೇನೆ. ಮ್ಯೂಟೇಷನ್ ಯಾವುದೇ ಆಧಾರದ ಮೇಲೆ ನಮ್ಮ ಹೆಸರಿನಲ್ಲಿ ಆಯಿತು ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ, ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ನಾವು ಮಾರಾಟ ಮಾಡಿದ ಜಮೀನಿನ ಕಬ್ಜೆಯನ್ನು 8 ರಿಂದ 10 ನೇ ಪ್ರತಿವಾದಿಗಳಿಗೆ ಜಮೀನುಗಳಿಗೆ ಹೋಗಿ ಕೊಡಿಸಿರುತ್ತೇವೆ. ಇವತ್ತಿನವರೆಗೂ 1 ರಿಂದ 5 ನೇ ಪ್ರತಿವಾದಿಗಳೇ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಖರೀದಿ ಪತ್ರಗಳಲ್ಲಿ ಮೌಲಾಸಾಬ, ಮೌಲಾಂಬೀ ಹಾಗೂ 1 ನೇ ಪ್ರತಿವಾದಿ ಸಹಿಗಳನ್ನು ನಾವೇ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇನ್ನುವರೆಗೂ ದಾವಾ ಸ್ವತ್ತುಗಳು ನಮ್ಮ ಹೆಸರಿಗೆ ಹಾಗೂ ನಾವು ಮಾರಾಟ ಮಾಡಿದ ಮಾರಾಟಗಾರರ ಹೆಸರಿನಲ್ಲಿ ಯಾವುದರ ಮುಖಾಂತರ ಆಗಿರುತ್ತವೆ ಎಂದು ತೋರಿಸುವ ಸಲುವಾಗಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.44/4 ಇನ್ನುವರೆಗೂ ಅಮೀರ್ ಅಲಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ಅಮೀರ್ ಅಲಿ ಸ್ವಂತ ಸಂಪಾಧಿಸಿದ ಆಸ್ತಿ ಎಂದರೆ ಸರಿಯಲ್ಲ.

ನಮಗೂ ಮತ್ತು 1 ರಿಂದ 5 ನೇ ಪ್ರತಿವಾದಿಯರಿಗೆ ಹಾಗೂ ಅವರ ಆಸ್ತಿಗೆ ಮತ್ತು ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ನಮ್ಮ ತಂದೆ ತಿರಿಕೊಂಡ ನಂತರ ವಾರಸುದಾರರ ಪ್ರಮಾಣ ಪತ್ರವನ್ನು ತಹಶಿಲ್ದಾರ ಕಛೇರಿಯಿಂದ ಪಡೆದಿಲ್ಲ. 1 ರಿಂದ 5 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳು ಹೋಗಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನೋಂದ ಮಾಡಿಕೊಟ್ಟ ಎಲ್ಲ ಕ್ರಯ ಪತ್ರಗಳು ನಕಲಿ ಇರುತ್ತವೆ ಹಾಗೂ ಪ್ರತಿವಾದಿಯರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>**ಪಾಟೀ ಸವಾಲು:** 8 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದ:</u>

(8 ಮತ್ತು 9 ನೇ ಪ್ರತಿವಾದಿಗಳ ಪರ ವಕೀಲರು ಮದ್ಯಾಹ್ನ 3.00 ಗಂಟೆಗೆ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಪುನಃ ಮದ್ಯಾಹ್ನ 3.30 ಗಂಟೆಗೆ ಕರೆಯಿಸಿ ಪ್ರಮಾಣೀಕರಿಸಲಾಯಿತು.

ದಿನಾಂಕ: 02.07.2024.

<u>**ಪಾಟೀ ಸವಾಲು:** 8 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದ:</u>

ಸರ್ವೆ ನಂ.16/6 ರ ಜಮೀನನ್ನು ಮೌಲಾಸಾಬ 1979 ರಲ್ಲಿ ಮಹಾದೇವಪ್ಪ ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಮೌಲಾಸಾಬ ರವರಿಗೆ ಇಬ್ಬರು ಹೆಂಡತಿಯರು,

ಮೌಲಂಬೀ ಮತ್ತು ಚಾಂದಬೀ ಇರುತ್ತಾರೆ. ಮೌಲಾಸಾಬ ಜೀವಂತ ಕಾಲಕ್ಕೆ ಸದರಿ ಜಮೀನನ್ನು ತಮ್ಮ ಮಕ್ಕಳ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾಯಿಯ ಹೆಸರು ಚಾಂದಬೀ ಇರುತ್ತದೆ. ಅಮೀರ್ ಅಲಿ ತಾಯಿಯ ಹೆಸರು ಮೌಲಂಬೀ ಇರುತ್ತದೆ. 2002 ರಲ್ಲಿ ನಮ್ಮ ಮನೆಯ ಸಂಸಾರಕ್ಕೆ ಹಾಗೂ ಕುಟುಂಬದ ಅಡೆಚಣೆ ಸಲುವಾಗಿ, 8 ಮತ್ತು 9 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ ನನ್ನ ಎಲ್ಲ ಅಣ್ಣ-ತಮ್ಮಂದಿರು ಮತ್ತು ತಾಯಿಯಂದಿರು ಸಹಿ ಮಾಡಿರುತ್ತೇವೆ ಎಂದರೆ ಸರಿ. 2002 ರಿಂದ ಇಲ್ಲಿಯವರೆಗೂ 8 ಮತ್ತು 9 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**